**ಕೋವಿಡ್ 19 : ಸಂಪುಟ ಉಪಸಮಿತಿಯ ಮೊದಲನೇ ಸಭೆ**
**ದಿನಾಂಕ: 26.12.2023**

**<u>ಮಾಧ್ಯಮ ಟಿಪ್ಪಣಿ</u>**

ಕೋವಿಡ್ 19 ಸಾಂಕ್ರಾಮಿಕದ ನಿಯಂತ್ರಣ ಹಾಗೂ ಪರಿಸ್ಥಿತಿಯನ್ನು ಪರಾಮರ್ಶಿಸಲು ಸಚಿವ ಸಂಪುಟದ ಉಪಸಮಿತಿಯು ದಿನಾಂಕ: 26.12.2023 ರಂದು ಸಭೆ ನಡೆಸಿ, ಈ ಕೆಳಗಿನ ನಿರ್ಧಾರಗಳನ್ನು ಕೈಗೊಳ್ಳಲಾಯಿತು.

1. ಪ್ರಸ್ತುತ, ರಾಜ್ಯದಲ್ಲಿ 436 ಸಕ್ರಿಯ ಕೋವಿಡ್ 19 ಪ್ರಕರಣಗಳಿವೆ. ದಿನಾಂಕ: 26.12.2023ರಿಂದ ಪ್ರತಿದಿನ 5000 ಟೆಸ್ಟಿಂಗ್ ಗುರಿಯನ್ನು ಸಾಧಿಸಲಾಗುವುದು. ಕೋವಿಡ್ ಟೆಸ್ಟಿಂಗ್ ನಲ್ಲಿ ರಾಜ್ಯವು 2ನೇ ಸ್ಥಾನದಲ್ಲಿರುವುದರಿಂದ (ಕೇರಳ ರಾಜ್ಯವು ಮೊದಲನೇ ಸ್ಥಾನದಲ್ಲಿದೆ), ಪಾಸಿಟಿವ್ ಪ್ರಕರಣಗಳ ಸಂಪರ್ಕಿತರು ಸೋಂಕಿನ ಲಕ್ಷಣಗಳನ್ನು ಹೊಂದಿದ್ದಲ್ಲಿ ಕೋವಿಡ್ ಪರೀಕ್ಷೆಯನ್ನು ಮಾಡಿಸಿಕೊಳ್ಳಬೇಕು.

2. ಒಟ್ಟು 436 ಪ್ರಕರಣಗಳ ಪೈಕಿ, 400 ಪ್ರಕರಣಗಳು ಹೋಂ ಐಸೋಲೇಷನ್ ನಲ್ಲಿದ್ದು, ಉಳಿದ 36 ಪ್ರಕರಣಗಳು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಹೋಂ ಐಸೋಲೇಷನ್ ನಲ್ಲಿರುವ ಹಾಗೂ ಆಸ್ಪತ್ರೆಯ ಜನರಲ್ ವಾರ್ಡ್ ನಲ್ಲಿ ಕೋವಿಡ್ ಚಿಕಿತ್ಸೆಗಾಗಿ ದಾಖಲಾಗಿರುವವರನ್ನು ನಗರ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ನಮ್ಮ ಕ್ಲಿನಿಕ್ ನ ವೈದ್ಯರು ಹಾಗೂ ಸಿಬ್ಬಂದಿಯ ತಂಡವು ಭೇಟಿ ನೀಡಿ, ರೋಗ ಲಕ್ಷಣಗಳನ್ನು ಪರಿಶೀಲಿಸಿ ಮೇಲ್ವಿಚಾರಣೆ ನಡೆಸುವುದು. ಐ ಸಿ ಯು ನಲ್ಲಿ ದಾಖಲಾಗಿರುವ ಪ್ರಕರಣಗಳ ಪ್ರಕರಣಗಳನ್ನು, ಈ ಮೊದಲಿನಂತೆ ರಾಜ್ಯ ಮಟ್ಟದಿಂದ Tele ICU ನ ಮೂಲಕ ಮೇಲ್ವಿಚಾರಣೆ ನಡೆಸುವುದು.

3. ಸಾಕಷ್ಟು ಸಂಖ್ಯೆಯ ಕೋವಿಡ್ ಪಾಸಿಟಿವ್ ಮಾದರಿಗಳನ್ನು (ಭಾರತ ಸರ್ಕಾರದ ಮಾರ್ಗಸೂಚಿಯಂತೆ) National Centre for Biological Sciences, Bengaluru & National Institute of Virology, Pune, ಇಲ್ಲಿಗೆ ಜೀನೋಮ್ ಸೀಕ್ವೆನ್ಸ್ ಗಾಗಿ ಕಳುಹಿಸುವುದು.

4. PSA plantಗಳು & LMO plantಗಳನ್ನು ಸಿದ್ಧವಾಗಿರಿಸಿಕೊಳ್ಳುವುದು. PESO license ಅನ್ನು ಆದಷ್ಟು ಶೀಘ್ರವಾಗಿ ಪಡೆಯುವುದು ( ಕನಿಷ್ಠ ವಿಭಾಗಕ್ಕೆ ಒಂದರಂತೆ) , ಇದರಿಂದ ರಾಜ್ಯದ ಆಕ್ಸಿಜನ್ ಉತ್ಪಾದನಾ ಪ್ರಮಾಣವನ್ನು ಪುಷ್ಟೀಕರಿಸಿದಂತಾಗುವುದು.

5. ಆಸ್ಪತ್ರೆಗಳಲ್ಲಿ ಅಣಕು ಪ್ರದರ್ಶನವನ್ನು ನಡೆಸುವುದು. ಹಾಸಿಗೆಗಳು ಹಾಗೂ ವೆಂಟಿಲೇಟರ್ ನ ಸಿದ್ಧತೆಯನ್ನು ಖಚಿತಪಡಿಸಿಕೊಳ್ಳುವುದು.

6.ಅಂದಾಜು 30000 ಮುನ್ನೆಚ್ಚರಿಕಾ ಡೋಸ್ಗಳ ಕೋವಿಡ್ 19 ಲಸಿಕೆಯನ್ನು , ವಿಶೇಷವಾಗಿ ವೃದ್ಧರು ಹಾಗೂ immune compromised ವ್ಯಕ್ತಿಗಳಿಗೆ ನೀಡಲಾಗುವುದು.

7. Sewage Surveillance ಚಟುವಟಿಕೆಯನ್ನು TIGS, Bengaluru, ಇವರು ಮುಂದುವರೆಸುವುದು ಹಾಗೂ ನಿಗದಿತವಾಗಿ ವರದಿಯನ್ನು ಸಲ್ಲಿಸುವುದು. ಪ್ರಸ್ತುತ, ಕೋವಿಡ್ 19ನ JN1ಉಪತಳಿಯು ವರದಿಯಾಗಿರುವ ಹಿನ್ನೆಲೆಯಲ್ಲಿ Indian Institute of Science, Bengaluru / Indian Statistical Institute , Bengaluru, ಇವರು, Covid 19 ಮುನ್ಸೂಚನಾ ಮಾದರಿಗಳನ್ನು ಸಿದ್ಧಪಡಿಸುವುದು.

8.ಆಸ್ಪತ್ರೆಗಳು ಕಾರ್ಯನಿರ್ವಹಿಸುತ್ತಿರುವ ಆರೋಗ್ಯ ಸಿಬ್ಬಂದಿಗಳಿಗೆ Flu ಲಸಿಕೆಯನ್ನು ನೀಡಲಾಗುವುದು.

9. ವಿಕ್ಟೋರಿಯಾ ಆಸ್ಪತ್ರೆಯ H ಬ್ಲಾಕ್, ರಾಜೀವ್ ಗಾಂಧಿ ಎದೆ ರೋಗಗಳ ಆಸ್ಪತ್ರೆ, ಬೆಂಗಳೂರು ಹಾಗೂ ಎಲ್ಲಾ ಜಿಲ್ಲಾಸ್ಪತ್ರೆ ಮತ್ತು ವೈದ್ಯಕೀಯ ಕಾಲೇಜು ಆಸ್ಪತ್ರೆಗಳಲ್ಲಿ ಕೋವಿಡ್ ಐಸೋಲೇಷನ್ ವಾರ್ಡ್ ಗಳನ್ನು ಸಿದ್ಧಪಡಿಸಿ ಸನ್ನದ್ಧವಾಗಿಡುವುದು.

10. ರಾಜ್ಯದಲ್ಲಿ ಕೋವಿಡ್ ನಿಂದ ವರದಿಯಾಗುತ್ತಿರುವ ಮರಣ ಪ್ರಕರಣಗಳನ್ನು ರಾಜ್ಯ ಮರಣ ಆಡಿಟ್ ಸಮಿತಿಯು ಅಧ್ಯಯನ ನಡೆಸಿ, ಅದರಂತೆ ಕೋವಿಡ್ ಪ್ರಕರಣಗಳ ಚಿಕಿತ್ಸೆಗೆ ಅಗತ್ಯ ಶಿಫಾರಸ್ಸುಗಳನ್ನು ನೀಡುವುದು.

11. ಮಾಸ್ಕ್ ಧರಿಸುವಂತೆ ನೀಡಿರುವ ಸಲಹೆಯನ್ನು ವಿಶೇಷವಾಗಿ ವೃದ್ಧರು ಹಾಗೂ immune compromised ವ್ಯಕ್ತಿಗಳಿಗೆ ಪುನರುಚ್ಚರಿಸಲಾಗಿದೆ. ಆದಾಗ್ಯೂ, ಸಾರ್ವಜನಿಕರ ಓಡಾಟ/ ಪ್ರಯಾಣ/ಹೊಸ ವರ್ಷಾಚರಣೆಗೆ ಯಾವುದೇ ನಿರ್ಭಂದಗಳನ್ನು ವಿಧಿಸಿರುವುದಿಲ್ಲ. ರಾಜ್ಯದ ಗಡಿ ಭಾಗಗಳಲ್ಲಿ ಯಾವುದೇ ರೀತಿಯ ತಪಾಸಣೆ ಇರುವುದಿಲ್ಲ.

12. ನೆಗಡಿ, ಕೆಮ್ಮು ಹಾಗೂ ಜ್ವರದಿಂದ ಬಳಲುತ್ತಿರುವ ಮಕ್ಕಳನ್ನು, ಲಕ್ಷಣಗಳು ಉತ್ತಮವಾಗುವವರೆಗೂ ಪೋಷಕರು ಶಾಲೆಗೆ ಕಳುಹಿಸುವಂತಿಲ್ಲ.

13. ಸರ್ಕಾರಿ ಹಾಗೂ ಸರ್ಕಾರೇತರ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವವರು ಕೋವಿಡ್ 19 ಪಾಸಿಟಿವ್ ಆದಲ್ಲಿ ಹೋಂ ಐಸೋಲೇಷನ್ ಗಾಗಿ 7 ದಿನಗಳ ರಜೆಯನ್ನು ಬಳಸಿಕೊಳ್ಳಲು ಅರ್ಹರಾಗಿರುತ್ತಾರೆ.

14. ಖಾಸಗಿ ಆಸ್ಪತ್ರೆಗಳಲ್ಲಿ ಕೋವಿಡ್ 19 RAT, RTPCR ಹಾಗೂ ಸಂಬಂಧಪಟ್ಟ ಇತರ ಪರೀಕ್ಷೆಗಳ ದರವನ್ನು ನಿಗದಿಗೊಳಿಸಲು, ನಿರ್ದೇಶಕರು , ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಇವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿ 2 ದಿನಗಳ ಒಳಗೆ ವರದಿಯನ್ನು ಸಲ್ಲಿಸುವುದು.

15. CT thorax scan ಅನ್ನು ಕೋವಿಡ್ 19 screening test ಆಗಿ ಬಳಸುವಂತಿಲ್ಲ.

16. ಪ್ರಸ್ತುತ, ಕೋವಿಡ್ 19 ಚಿಕಿತ್ಸೆಗಾಗಿ ಖಾಸಗಿ ಆಸ್ಪತ್ರೆಗಳಿಗೆ ದಾಖಲಾಗುತ್ತಿರುವವರ ಸಂಖ್ಯೆಯು ಕಡಿಮೆ ಇರುವ ಹಿನ್ನೆಲೆಯಲ್ಲಿ, ಚಿಕಿತ್ಸಾ ದರವನ್ನು ನಿಗದಿಪಡಿಸುವ ಪ್ರಸ್ತಾವನೆಯು ಸದ್ಯಕ್ಕೆ ಸರ್ಕಾರದ ಮುಂದಿರುವುದಿಲ್ಲ.

17. ತಾಲ್ಲೂಕು ಹಾಗೂ ಜಿಲ್ಲಾಸ್ಪತ್ರೆಗಳ ICU ಗಳನ್ನು ಕ್ರಿಯಾತ್ಮಕಗೊಳಿಸಲು 6 ತಿಂಗಳ ಅವಧಿಗೆ ಹೆಚ್ಚುವರಿ ಮಾನವ ಸಂಪನ್ಮೂಲವನ್ನು ಕೋರುತ್ತಾ ಪ್ರಸ್ತಾವನೆಯನ್ನು ಆಯುಕ್ತಾಲಯ, ಆರೋಗ್ಯ & ಕು ಕ ಸೇವೆಗಳು ಹಾಗೂ ನಿರ್ದೇಶಕರು, ವೈದ್ಯಕೀಯ ಶಿಕ್ಷಣ, ಇವರು ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸುವುದು.

18. ಕೋವಿಡ್ 19 ರಾಜ್ಯ ತಾಂತ್ರಿಕ ಸಲಹಾ ಸಮಿತಿಗೆ ಇನ್ನೂ ಹೆಚ್ಚಿನ ತಜ್ಞರು / ವೈದ್ಯರು , ನಿರ್ದೇಶಕರು, ಆರೋಗ್ಯ & ಕು ಕ ಸೇವೆಗಳು ಮತ್ತು ವೈದ್ಯರು , ವೈದ್ಯಕೀಯ ಶಿಕ್ಷಣ ಇಲಾಖೆ, ಇವರನ್ನು ಸೇರಿಸಿಕೊಳ್ಳುವುದು.